ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 83 (176)
ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : ದಿನಾಂಕ: 13-09-2021
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯಾದ್ಯಂತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು ಶಿಕ್ಷಕರುಗಳ ಹುದ್ದೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ – 25813 ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ – 15924 (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ.)
ಆ.	ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಮತ್ತು ಯಾವ ಕಾಲ ಮಿತಿಯೊಳಗೆ ಈ ಖಾಲಿ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಲಿದೆ;	ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು 25813 ಹುದ್ದೆಗಳಲ್ಲಿ ಶೇಕಡಾ 25 ಮುಂಬಡ್ತಿ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಹುದ್ದೆಗಳಲ್ಲಿ ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ 5,000 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮಾನ್ಯ ಮುಖ್ಯಮಂತ್ರಿಯವರು ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಘೋಷಣೆ ಮಾಡಿರುತ್ತಾರೆ. ಈ ಸಂಬಂಧ ಕ್ರಮವಹಿಸುವ ಸಲುವಾಗಿ ಕಡತವು ಪರಿಶೀಲನೆಯಲ್ಲಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳಲ್ಲಿ 3590 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.
ಇ.	ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ತರಬೇತಿ ನೀಡುತ್ತಿದ್ದಾರೆಯೇ; ಇಲ್ಲದಿದ್ದಲ್ಲಿ, ಕಂಪ್ಯೂಟರ್ ತರಬೇತಿ ಕೊಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;	ಹೌದು, ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP)ವನ್ನು ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 2016-17ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಶಾಲೆಗಳಿಗೆ ಒದಗಿಸಲಾಗುವ ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು (ಲ್ಯಾಪ್ ಟಾಪ್, ಪ್ರೊಜೆಕ್ಟರ್, ಕಂಪ್ಯೂಟರ್‌ಗಳನ್ನು) ಬಳಸುವ ಕುರಿತು, ಇ-ಸಂಪನ್ಮೂಲಗಳನ್ನು ಬಳಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸುವ ಮತ್ತು ಇ-ಸಂಪನ್ಮೂಲಗಳನ್ನು ಸೃಜಿಸುವ ಕೌಶಲ್ಯಗಳ ಕುರಿತು ಪ್ರತಿ ಪ್ರೌಢಶಾಲಾ ಶಿಕ್ಷಕರಿಗೆ 10 ದಿನಗಳ ಇಂಡಕ್ಷನ್ ತರಬೇತಿ (induction Training) ನೀಡಲಾಗುತ್ತಿದೆ. **ಪ್ರಗತಿ ವಿವರ ಕೆಳಕಂಡಂತಿದೆ.**

ವರ್ಷ	ತರಬೇತಿ ಪಡೆದ ಶಿಕ್ಷಕರ ಸಂಖ್ಯೆ
2016-17	3459
2017-18	5218
2018-19	4472
2019-20	13994

<table>
<tr><td></td><td></td><td><table><tr><td>2020-21</td><td>11489</td></tr><tr><td>ಒಟ್ಟು</td><td>38632</td></tr></table></td></tr>
<tr><td>ಈ.</td><td>ರಾಜ್ಯಾದ್ಯಂತ 2020-21ನೇ ಸಾಲಿನಲ್ಲಿ ಶಾಲೆಗೆ ಹೊಸದಾಗಿ ದಾಖಲಾದ ಮಕ್ಕಳ ಸಂಖ್ಯೆ ಎಷ್ಟು; ದಾಖಲಾಗದೆ ಹೊರಗುಳಿದ ಮಕ್ಕಳ ಸಂಖ್ಯೆ ಎಷ್ಟು;</td><td>ರಾಜ್ಯಾದ್ಯಂತ 2020-21ನೇ ಸಾಲಿನಲ್ಲಿ ಶಾಲೆಗೆ ಹೊಸದಾಗಿ ದಾಖಲಾದ ಮಕ್ಕಳ ಸಂಖ್ಯೆ ಮತ್ತು ದಾಖಲಾಗದೆ ಹೊರಗುಳಿದ ಮಕ್ಕಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ತರಗತಿ</th><th>2021-22ನೆ ಸಾಲಿನಲ್ಲಿ ದಾಖಲಾದ ಮ್ಮಕಳ ಸಂಖ್ಯೆ</th><th>ದಾಖಲಾಗದೆ ಹೊರಗುಳಿದ ಮ್ಮಕಳ ಸಂಖ್ಯೆ</th></tr>
<tr><td>1</td><td>ಕಿರಿಯ ಪ್ರಾಥಮಿಕ ಶಾಲೆ (1-5)</td><td>5332830</td><td>20182</td></tr>
<tr><td>2</td><td>ಹಿರಿಯ ಪ್ರಾಥಮಿಕ ಶಾಲೆ (6-8)</td><td>3174336</td><td>39230</td></tr>
<tr><td>3</td><td>ಪ್ರೌಢಶಾಲೆ (9-10)</td><td>1918862</td><td>53308</td></tr>
<tr><td></td><td>ಒಟ್ಟು</td><td>1,04,26,028</td><td>1,12,720</td></tr>
</table>
2020-21ರಲ್ಲಿ ಇಲಾಖೆಯು ಸಿದ್ಧಪಡಿಸಿದ ಶಿಕ್ಷಣ ಕಿರಣ ತಂತ್ರಾಂಶದಲ್ಲಿ ಶಾಲಾ ಮುಖ್ಯ ಶಿಕ್ಷಕರು ದತ್ತಾಂಶವನ್ನು ಭರ್ತಿ ಮಾಡಿರುವ ಆಧಾರದ ಮೇಲೆ ಈ ಮಾಹಿತಿಯನ್ನು ನೀಡಲಾಗಿದೆ.</td></tr>
<tr><td>ಉ.</td><td>ಶಾಲೆಗೆ ದಾಖಲಾಗದೆ ಹೊರಗುಳಿದ ಮಕ್ಕಳನ್ನು ಪ್ರೋತ್ಸಾಹಿಸಿ ಶಾಲೆಗೆ ದಾಖಲಾಗುವಂತೆ ಮಾಡಲು ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?</td><td>ಶಾಲೆಗೆ ದಾಖಲಾಗದ ಹೊರಗುಳಿದ ಮಕ್ಕಳನ್ನು ಪ್ರೋತ್ಸಾಹಿಸಿ, ಶಾಲೆಗೆ ದಾಖಲಾಗುವಂತೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳು:-
1) ಶಾಲೆಯಿಂದ ಹೊರಗುಳಿದ ಮಕ್ಕಳು ಯಾವುದೇ ಸಂದರ್ಭದಲ್ಲಿ ಶಾಲೆಗೆ ದಾಖಲಾಗಿದ್ದಲ್ಲಿ, ಸಾಮಾನ್ಯ ವಿದ್ಯಾರ್ಥಿಗಳಿಗೆ ನೀಡುವ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಮಧ್ಯಾಹ್ನದ ಉಪಹಾರ ನೀಡಲಾಗುತ್ತದೆ.
2) ಇದರ ಹೊರತಾಗಿಯೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ವಸತಿ/ವಸತಿರಹಿತ ವಿಶೇಷ ತರಬೇತಿ ಕಾರ್ಯಕ್ರಮ, ಟೆಂಟ್ ಶಾಲೆ, ನಗರ ಶಿಕ್ಷಣ ವಂಚಿತ ಮಕ್ಕಳಿಗಾಗಿ ಚಿಣ್ಣರ ತಂಗುಧಾಮ ಕೇಂದ್ರಗಳು ನಡೆಸಲಾಗುತ್ತಿದೆ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ವಸತಿ ಶಾಲೆ/ವಸತಿ ನಿಲಯಗಳಿಗೆ ದಾಖಲಿಸಲಾಗುತ್ತದೆ.</td></tr>
</table>

ಸಂಖ್ಯೆ: ಇಪಿ 31 ಪಿಎಂಎ 2021

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು.

ರಾಜ್ಯದ (ಕಲ್ಯಾಣ ಕರ್ನಾಟಕದ 06 ಜಿಲ್ಲೆಗಳು) ಸೇರಿದಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಜಿಲ್ಲಾವಾರು ವಿವರ

ಅನುಬಂಧ-1

ಕ್ರಮ ಸಂಖ್ಯೆ		ಖಾಲಿ ಹುದ್ದೆಗಳು
1	ಬೆಳಗಾವಿ	933
2	ಬಾಗಲಕೋಟೆ	1290
3	ವಿಜಯಪುರ	1075
4	ಕಲ್ಬುರ್ಗಿ	1807
5	ಬೀದರ್	436
6	ರಾಯಚೂರು	1907
7	ಕೊಪ್ಪಳ	1320
8	ಗದಗ್	463
9	ಧಾರವಾಢ	508
10	ಉತ್ತರ ಕನ್ನಡ	87
11	ಹಾವೇರಿ	479
12	ಬಳ್ಳಾರಿ	762
13	ಚಿತ್ರದುರ್ಗ	470
14	ದಾವಣಗೆರೆ	1160
15	ಶಿವಮೊಗ್ಗ	712
16	ಉಡುಪಿ	356
17	ಚಿಕ್ಕಮಗಳೂರು	48
18	ತುಮಕೂರು	369
19	ಕೋಲಾರ	256
20	ಬೆಂಗಳೂರು ದಕ್ಷಿಣ	732
21	ಬೆಂಗಳೂರು ಗ್ರಾಮಾಂತರ	250
22	ಮಂಡ್ಯ	775
23	ಹಾಸನ	545
24	ದಕ್ಷಿಣ ಕನ್ನಡ	988
25	ಕೊಡಗು	238
26	ಮೈಸೂರು	942
27	ಚಾಮರಾಜನಗರ	521
28	ಬೆಂಗಳೂರು ಉತ್ತರ	317
29	ಚಿಕ್ಕಬಳ್ಳಾಪುರ	500
30	ಚಿಕ್ಕೋಡಿ	2119
31	ಮಧುಗಿರಿ	416
32	ರಾಮನಗರ	452
33	ಯಾದಗಿರಿ	1942
34	ಸಿರ್ಸಿ	641
	ಒಟ್ಟು :	**25813**

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

Education Employees Data System, Karnataka GHS Teachers details

REPORT DATE:9.9.21

SL NO	DISTRICT	VACANT
1	BAGALKOT(2902)	155
2	KOPPAL(2907)	357
3	TUMKUR(2918)	589
4	CHIKKAMANGALORE(2917)	587
5	RAMANAGARA(2932)	473
6	CHAMARAJANAGARA(2927)	428
7	KODAGU(2925)	272
8	VIJAYAPURA(2903)	210
9	BELGAUM(2901)	367
10	BANGALORE U NORTH(2928)	220
11	BIDAR(2905)	550
12	MYSORE(2926)	886
13	GULBARGA(2904)	785
14	YADAGIRI(2933)	369
15	MANDYA(2922)	1110
16	DAVANAGERE(2914)	833
17	DHARWAD(2909)	165
18	DAKSHINA KANNADA(2924)	729
19	KOLAR(2919)	650
20	UTTARA KANNADA(2910)	134
21	CHITRADURGA(2913)	416
22	CHIKKODI(2930)	250
23	RAICHUR(2906)	300
24	BELLARY(2912)	375
25	BANGALORE RURAL(2921)	286
26	MADHUGIRI(2931)	428
27	BANGALORE U SOUTH(2920)	334
28	SHIMOGA(2915)	716
29	UDUPI(2916)	492
30	CHIKKABALLAPURA(2929)	494
31	GADAG(2908)	151
32	HASSAN(2923)	1236
33	HAVERI(2911)	348
34	SIRSI(2934)	229
	TOTAL	**15924**

ನಿರ್ದೇಶಕರು, (ಪ್ರೌಢ ಶಿಕ್ಷಣ)

ಸಾರ್ವಜನಿಕ [illegible], ಬೆಂಗಳೂರು

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001

ದಿನಾಂಕ: 30-05-2018.

ಸಂಖ್ಯೆ: ಶಿ4(1) ಪ್ರೌಶಾಶಿ ಹು.ಭ.ಅ.01/2018-19

ರವರಿಗೆ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.

ಮಾನ್ಯರೆ,

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ರಾಜ್ಯದ ಉಪನಿರ್ದೇಶಕರು (ಆಡಳಿತ) ರವರಿಂದ ಪಡೆದ ಖಾಲಿ ಹುದ್ದೆಗಳ ಮಾಹಿತಿ

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ರಾಜ್ಯದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ದಿನಾಂಕ: 1-03-2018 ಕ್ಕೆ ಇದ್ದಂತೆ ವೃಂದವಾರು ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಪಡೆಯಲಾಗಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮತ್ತು ಬಡ್ತಿ ಅನುಪಾತದಲ್ಲಿ ಹುದ್ದೆಗಳನ್ನು ಮೀಸಲಿಟ್ಟು, ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳನ್ನು 2018-19ನೇ ಸಾಲಿನಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರ್ಗಿ ವಿಭಾಗಗಳಿಂದ ನೇರ ನೇಮಕಾತಿ ಮೂಲಕ ಖಾಲಿ ಹುದ್ದೆಗಳನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಭರ್ತಿ ಮಾಡಲು ಪ್ರಸ್ತುತ ವೃಂದವಾರು ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ವಿವರಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಿ ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲು ಕೋರಿದೆ.

ಕ್ರಸಂ	ಪದನಾಮ	ಒಟ್ಟು ಖಾಲಿ ಹುದ್ದೆಗಳು	ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳು	ಬಡ್ತಿಗೆ ಕಾಯ್ದಿರಿಸಿದ ಹುದ್ದೆಗಳು
01	ಸಹ ಶಿಕ್ಷಕರು	35[illegible]1	1801	1800
02	ದೈಹಿಕ ಶಿಕ್ಷಣ ಶಿಕ್ಷಕರು	4[illegible]1	331	110
03	ಚಿತ್ರಕಲಾ ಶಿಕ್ಷಕರು	3[illegible]9	339	0
04	ವೃತ್ತಿ ಶಿಕ್ಷಕರು	9[illegible]9	989	0
05	ಸಂಗೀತ ನೃತ್ಯ ನಾಟಕ ಶಿಕ್ಷಕರು	1[illegible]0	130	0
	ಒಟ್ಟು	[illegible]500	3590	1910

ತಮ್ಮ ನಂಬುಗೆಯ

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

C:\Users\win10\Desktop\Sec Vacant Post.docx

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560 001

ದಿನಾಂಕ: 18.02.2019

ಸಂಖ್ಯೆ: ಸಿ4(1). ಸ.ಪ್ರೌ.ಶಾ./ಹು.ಭ.ಅನು01/2018-1

ಇವರಿಗೆ,

ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು,
[ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ],
ಶಿಕ್ಷಣ ಇಲಾಖೆ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು

ಮಾನ್ಯರೇ,

ವಿಷಯ:-ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ

ಉಲ್ಲೇಖ:-1. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 30.05.2018

2. ಸರ್ಕಾರದ ಪತ್ರ ಸಂಖ್ಯೆ: ಇಡಿ.144.ಎಲ್.ಬಿ.ಪಿ 2018 ದಿನಾಂಕ: 01.09.2018

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ [1]ರ ಈ ಕಛೇರಿಯ ಪತ್ರದಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ದಿನಾಂಕ 31.03.2018ಕ್ಕೆ ಖಾಲಿ ಇರುವ 5500 ಸಹ ಶಿಕ್ಷಕರ ಹುದ್ದೆಗಳ ಪೈಕಿ ಬಡ್ತಿಗೆ ಕಾಯ್ದಿರಿಸಿದ 1910 ಹುದ್ದೆಗಳನ್ನು ಹೊರತು ಪಡಿಸಿ ಉಳಿದ 3590 ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಉಲ್ಲೇಖ [1]ರ ಪತ್ರದನ್ವಯ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಉಲ್ಲೇಖ [2]ರ ಸರ್ಕಾರದ ಪತ್ರದಲ್ಲಿ ಈ ಕುರಿತು ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ. ಸರ್ಕಾರದ ಪತ್ರದಲ್ಲಿ ಕೋರಿರುವ ಅಂಶಗಳಿಗೆ ಈ ಕೆಳಕಂಡಂತೆ ಮಾಹಿತಿ ಒದಗಿಸಿದೆ.

1 ರಾಜ್ಯದ ಪ್ರೌಢಶಾಲೆಗಳಿಗೆ ನಿಗದಿಪಡಿಸಿರುವ ಪ್ರಮಾಣಿಕ ಸಿಬ್ಬಂದಿ ಮಾದರಿ

ಸರ್ಕಾರದ ಆದೇಶ ಸಂಖ್ಯೆ: ಇಡಿ.69.ಎಲ್.ಬಿ.ಪಿ 2011 ದಿನಾಂಕ: 01.04.2011ರನ್ವಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ತರ ವಿನ್ಯಾಸವನ್ನು ರಚಿಸಲಾಗಿದೆ. 03 ರಿಂದ 05 ವಿಭಾಗಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರಥಮ ಭಾಷೆ-01, ಹಿಂದಿ-01, ಆಂಗ್ಲ-01 ಕಲಾ-01, ವಿಜ್ಞಾನ ಪಿ.ಸಿ.ಎಂ.-01, ವಿಜ್ಞಾನ ಸಿ.ಬಿ.ಝೆಡ್-01 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-01ರಂತೆ ಒಟ್ಟು 07 ಸಹ ಶಿಕ್ಷಕರ ವೃಂದದ ಹುದ್ದೆಗೆ ಅವಕಾಶ ಕಲ್ಪಿಸಿದೆ. 06 ಅಥವಾ 06ಕ್ಕಿಂತ ಹೆಚ್ಚು ವಿಭಾಗಗಳು ಇದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತು ಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರಂತೆ ಪರಿಗಣಿಸಲು ಅವಕಾಶವಿರುತ್ತದೆ. ಪ್ರತಿ ವಿಭಾಗಕ್ಕೆ 70 ವಿದ್ಯಾರ್ಥಿಗಳ ಸಂಖ್ಯೆಯನ್ನು ಮಿತಿಗೊಳಿಸಲಾಗಿದೆ. [ಅನುಬಂಧ-1]

2. ಪ್ರಸ್ತಾಪಿತ ಹುದ್ದೆಗಳು ಖಾಲಿ ಇರುವ ರಾಜ್ಯದ ಪ್ರೌಢ ಶಾಲೆಗಳ ವಿವರ

ಈ ಹಿಂದೆ ಸಲ್ಲಿಸಿದ್ದ ಮಾಹಿತಿಯನ್ನಾಧರಿಸಿದ 5500 ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು ಇದರೊಂದಿಗೆ ಅನುಬಂಧಿಸಿದೆ [ಅನುಬಂಧ-2]

3. ಪ್ರೌಢಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ

ಎಸ್.ಎ.ಟಿ.ಎಸ್. ಮಾಹಿತಿನ್ನಾಧರಿಸಿದ ವಿದ್ಯಾರ್ಥಿಗಳ ದಾಖಲಾತಿ ವಿವರವನ್ನು ಇದರೊಂದಿಗೆ ಅನುಬಂಧಿಸಿದೆ [ಅನುಬಂಧ-3]

4. ಮಾರ್ಗಸೂಚಿಯಂತೆ ಶಿಕ್ಷಕರ ವಿದ್ಯಾರ್ಥಿಗಳ ಅನುಪಾತ.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು ನಿಗದಿಪಡಿಸಿರುವುದಿಲ್ಲ. ಈಗಾಗಲೇ ಮೇಲೆ ಕಂಡಿಕೆ 1 ರಲ್ಲಿ ವಿವರಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ.69.ಎಲ್.ಬಿ.ಪಿ 2011 ದಿನಾಂಕ 01.04.2011ರನ್ವಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ತರ ವಿನ್ಯಾಸವನ್ನು ರಚಿಸಲಾಗಿದೆ. 03 ರಿಂದ 05 ವಿಭಾಗಗಳಿಗೆ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರಥಮ ಭಾಷೆ-01, ಹಿಂದಿ-01, ಆಂಗ್ಲ-01 ಕಲಾ-01, ವಿಜ್ಞಾನ ಪಿ.ಸಿ.ಎಂ.-01, ವಿಜ್ಞಾ

ಸಿ.ಬಿ.ಝೆಡ್–01. ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–01ರಂತೆ ಒಟ್ಟು 07 ಸಹ ಶಿಕ್ಷಕರ ವೃಂದದ ಹುದ್ದೆಗೆ ಶಿಪಾರಸು ಕಲ್ಪಿಸಿದೆ. ಕನಿಷ್ಠ ವಿದ್ಯಾರ್ಥಿಗಳ ಹಾಜರಾತಿ ಇದ್ದರೂ ಸಹ ಸಿಬ್ಬಂದಿ ಸ್ತರ ವಿನ್ಯಾಸದನ್ವಯ ಮುಖ್ಯ ಶಿಕ್ಷಕರನ್ನು ಹೊರತು ಪಡಿಸಿ 07 ಸಹ ಶಿಕ್ಷಕರು ಕರ್ತವ್ಯ ನಿರ್ವಹಿಸಲು ಅವಕಾಶವಿರುತ್ತದೆ. 06 ಅಥವಾ 06ಕ್ಕಿಂತ ಹೆಚ್ಚು ವಿಭಾಗಗಳು ಇದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತು ಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರಂತೆ ಪರಿಗಣಿಸಲು ಅವಕಾಶವಿರುತ್ತದೆ. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಕೆಳಕಂಡಂತೆ ವಿಭಾಗಗಳನ್ನು ಗುರುತಿಸಲಾಗುವುದು.

ಕ್ರಮ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಪರಿಗಣಿಸಬೇಕಾದ ವಿಭಾಗ
1	70 ಅಥವಾ 70ಕ್ಕಿಂತ ಕಡಿಮೆ	01 ವಿಭಾಗ
2	71–140	02 ವಿಭಾಗ
3	141–210	03 ವಿಭಾಗ
4	211–280	04 ವಿಭಾಗ
5	281–350	05 ವಿಭಾಗ
6	351–420	06 ವಿಭಾಗ

5. **ಭರ್ತಿ ಮಡಲು ಕೋರಿರುವ ಶಿಕ್ಷಕರು ಯಾವ ವಿಷಯಗಳನ್ನು ಎಷ್ಟು ತರಗತಿಗಳಲ್ಲಿ ಎಷ್ಟು ಅವಧಿಗೆ ಬೋಧಿಸುತ್ತಾರೆ.**

ಈ ಸಂಬಂಧ ವಿವರಗಳನ್ನು ಒಳಗೊಂಡ ತಃಖ್ತೆಯನ್ನು ಇದರೊಂದಿಗೆ ಅನುಬಂಧಿಸಿದೆ [ಅನುಬಂಧ–4]

6. **ಪ್ರಸ್ತಾಪಿತ ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಡಿ.ಆರ್/ಸಿ.ಅರ್ ಮಾಹಿತಿ**

7. **ಪ್ರಸ್ತಾವನೆಗೆ ರಾಜ್ಯದ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಉಂಟಾಗುವ ಆರ್ಥಿಕ ವೆಚ್ಚ 2018–19ನೇ ಸಾಲಿನಲ್ಲಿ ಅನುದಾನದ ಲಭ್ಯತೆ ಮತ್ತು ತಡೆಪಟ್ಟಿ**

ಮೇಲ್ಕಂಡ ಕ್ರಮ ಸಂಖ್ಯೆ 6 ಮತ್ತು 7ರ ಪ್ರಸ್ತಾಪಿತ ಮಾಹಿತಿಯನ್ನು ಉಲ್ಲೇಖ [1]ರ ಈ ಕಛೇರಿ ಪತ್ರದಲ್ಲಿ ಈಗಾಗಲೆ ಸಲ್ಲಿಸಲಾಗಿದ್ದು, ಮತ್ತೊಂದು ಪ್ರತಿಯನ್ನು ಇದರೊಂದಿಗೆ ಅನುಬಂಧಿಸಿದೆ [ಅನುಬಂಧ–5]

ಉಲ್ಲೇಖ [2]ರ ಸರ್ಕಾರದ ಪತ್ರದಲ್ಲಿನ ಅಪೇಕ್ಷಿತ ಮಾಹಿತಿಯನ್ನು ಈ ಪತ್ರದೊಂದಿಗೆ ಅನುಬಂಧಿಸಿ ಸಲ್ಲಿಸುತ್ತಾ, ಉಲ್ಲೇಖ [1]ರ ಈ ಕಛೇರಿ ಪತ್ರದಲ್ಲಿ ಈಗಾಗಲೇ ಕೋರಿರುವಂತೆ ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಲು ಮತ್ತೊಮ್ಮೆ ಕೋರಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು, ಪ್ರೌಢ ಶಿಕ್ಷಣ

c:\users\win10\desktop\sharma.docx